ಈ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡಲಾಗುವುದು. ಉಳಿದ 6812 ಹುದ್ದೆಗಳಿಗೆ ಎರಡನೇ ಹಂತದಲ್ಲಿ ನೇಮಕಾತಿ ಮಾಡಲು ಸರ್ಕಾರದ ಹಂತದಲ್ಲಿ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿದ್ದು ನೇಮಕಾತಿ ಮಾಡಲು ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಲಾಗುವುದು.

ಮೈಸೂರು ಜಿಲ್ಲೆಯ ಸರ್ಕಾರಿ ಹಿರಿಯ: ಕಿರಿಯ ಪ್ರಾಥಮಿಕ ಶಾಲೆಗಳ ವಿವರ ತಾಲ್ಲೂಕುವಾರು ಮಾಹಿತಿ

ತಾಲ್ಲೂಕು ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1. ಟಿ. ನರಸೀಪುರ	606	70
2. ಹುಣಸೂರು	606	70
3. ಪಿರಿಯಾಪಟ್ಟಣ	576	80
4. ನಂಜನಗೂಡು	865	59
5. ಹೆಚ್.ಡಿ. ಕೋಟೆ	533	99
6. ಕೆ.ಆರ್. ನಗರ	686	34
7. ಗುಂಡ್ಲುಪೇಟೆ	503	54
8. ಯಳಂದೂರು	176	27
9. ಕೊಳ್ಳೇಗಾಲ	662	67
10. ಚಾಮರಾಜನಗರ	766	147
11. ಮೈಸೂರು ತಾ:	598	08
12. ಮೈಸೂರು ನಗರ	926	6
	7517	699

ಸವದತ್ತಿ ತಾಲ್ಲೂಕ್ ಪೈಕಿ ಚಿಕ್ಕಬುದನೂರ ನೀರಾವರಿ ಕೆರೆಗಳ ಕೆಲಸ

92 (722) ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಧಾನ ಸಭೆಯಲ್ಲಿ ಸವದತ್ತಿ ತಾಲ್ಲೂಕ್ ಪೈಕಿ ಚಿಕ್ಕಬುದನೂರ ನೀರಾವರಿ ಕೆರೆಯ ಕೆಲಸವನ್ನು ಕೂಡಲೇ ಪ್ರಾರಂಭಿಸಲಾಗುವುದೆಂದು ಆಶ್ವಾಸನೆ ನೀಡಿದ್ದರೂ ಇನ್ನೂವರೆಗೂ ಈ ಕೆಲಸ ಪ್ರಾರಂಭಿಸಲಾಗದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಕೆಲಸಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಇನ್ನೂವರೆಗೂ ನೀಡದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಈ ಕೆಲಸಕ್ಕೆ ಈ ವರ್ಷ. ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಒದಗಿಸಿದ ಹಣವನ್ನು ಸರ್ಕಾರದವರು ಈ ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಲಾಗುವುದೇ:

ಈ) ಸರ್ಕಾರದಲ್ಲಿ ಹಣ ಇಲ್ಲದೇ ಇರುವುದರಿಂದ ವಿನಾ ಕಾರಣ ಕೆಲವೊಂದು ದೋಷ ತೆಗೆದು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗುತ್ತಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಈಗಾಗಲೇ ಸದರಿ ಕಾಮಗಾರಿಯ ರೂ. 78.69 ಲಕ್ಷ ಅಂದಾಜು ಪಟ್ಟಿಗೆ ಜುಲೈ 89ರಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಈ ಸ್ಥಳದಲ್ಲಿ ಕೆರೆ ನಿರ್ಮಿಸಲು ಭೂ ಮಾಲೀಕರಿಂದ ತೀವ್ರ ವಿರೋಧ ಬಂದ ಕಾರಣ ಕೆರೆಯ ನಿವೇಶನವನ್ನು ಬದಲಾಯಿಸಿ ಮಾರ್ಪಡಿಸಿದ ಅಂದಾಜುಪಟ್ಟಿ ರೂ. 129 ಲಕ್ಷಗಳಿಗೆ ತಯಾರಾಗಿದ್ದು, ಇದಕ್ಕೆ ಮಂಜೂರಾತಿ ನೀಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1992–93ನೇ ಸಾಲಿಗೆ ರೂ. 40 ಲಕ್ಷಗಳ ಅನುದಾನವನ್ನು ನೀಡಲಾಗಿದೆ. ಮಾರ್ಪಡಿಸಿದ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ದೊರೆತ ಮೇಲೆ ಹಣ ಖರ್ಚು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆ

94 (433) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೈಕೋರ್ಟ್ ಪೀಠವನ್ನು ಬೆಂಗಳೂರು ಬಿಟ್ಟು ಬೇರೆ ಕಡೆಗೆ ಅಂದರೆ ಉತ್ತರ ಕರ್ನಾಟಕದ ಧಾರವಾಡದಲ್ಲಿ ಸ್ಥಾಪಿಸಲು ಹೈಕೋರ್ಟ್‌ದವರು ಒಪ್ಪಿಗೆ ನೀಡಿರುವರೇ;

ಆ) ಹಾಗಿದ್ದಲ್ಲಿ ಹೈಕೋರ್ಟ್ ಪೀಠವನ್ನು ಉತ್ತರ ಕರ್ನಾಟಕದ ಧಾರವಾಡದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದವರು ಒಪ್ಪಿಗೆ ನೀಡಿರುವರೆ;

ಇ) ಧಾರವಾಡದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸುವ ನಿರ್ಣಯವನ್ನು ತೆಗೆದುಕೊಂಡಿದ್ದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಕಾರ್ಯವು ಯಾವ ಹಂತದಲ್ಲಿದೆ;

ಈ) ಇನ್ನೂ ಎಷ್ಟು ಕಾಲಾವಕಾಶದಲ್ಲಿ ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸಲಾಗುವುದು; ಮತ್ತು ಅದು ಈಗ ಯಾವ ಹಂತದಲ್ಲಿ ಇರುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಸದರಿ ಪ್ರಸ್ತಾವನೆಯನ್ನು ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ಇಟ್ಟು ತೀರ್ಮಾನವನ್ನು ಸರ್ಕಾರಕ್ಕೆ ತಿಳಿಸಲಾಗುವುದೆಂದು ಉಚ್ಚ ನ್ಯಾಯಾಲಯ ತಿಳಿಸಿದೆ. ತೀರ್ಮಾನವನ್ನು ಎದುರು ನೋಡಲಾಗಿದೆ.

ಆ) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಪುನರ್‌ಪರಿಶೀಲಿಸಿದ ಅಭಿಪ್ರಾಯವನ್ನು ಪಡೆದು ನಂತರ ನಿರ್ದಿಷ್ಟ ಪ್ರಸ್ತಾವನೆಯನ್ನು ಪರಿಗಣನೆಗಾಗಿ ಕಳುಹಿಸಿಕೊಡಬೇಕೆಂದು ಕೇಂದ್ರ ಸರ್ಕಾರ ತಿಳಿಸಿದೆ.

ಇ) ಕೇಂದ್ರ ಸರ್ಕಾರವು ಸಲಹೆ ಮಾಡಿರುವಂತೆ ಸದರಿ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಸಹಮತಿಯನ್ನು ಕೋರಲಾಗಿದ್ದು ಅದು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.